166

ಹಾಸನ-ಡಿಸ್ಟ್ರಿಕ್ಟು.

ತಾರೀಖು 19ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದಿವಾನಸಾಹೇಬರವರ ಹುಕ್ಕುಂ ಬಮೋಜೇಬ್ ಹಾಸನ ಡಿಸ್ಟ್ರಿಕ್ಟು ಪೈಕಿ ಮಂಜರಾಬಾದು ತಾಲ್ಲೂಕಿನಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್ ಯಂಬ ಸುಂಕದ ಕಟ್ಟೆವಳಗೆ 1887ನೇ ಇಸವಿ ಏಪ್ರಿಲ್ ಮಾಹೆ 1ನೇ ಮುಕ್ತುಂ ಲಾಗಾಯತು 1888ನೇ ಇಸವಿ ಮಾರ್ಚಿ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯ ವು ಸ್ಯ 1887ನೇ ಇಸವಿ ಮಾರ್ಚಿ ತಾರೀಖು 1ರಲ್ಲು ಸಕಲೇಶಪುರದ ಮೊಕ್ತಾಂ ತಾಲ್ಲೂಕು ಕಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರ ಗಳ ಮೇರಿಗೆನೆ ಟೋಲ್ ವಸೂಲ್ ಮಾಡಬೇಕು. ಮತ್ತು ಸ್ಯ 1876ನೇ ಇಸವಿ ನವಂಬರ್ 4ನೇ ಮುಕ್ತುಂ 274ನೇ ನಂಬರುವುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇರ್ಷನ್ನಲ್ಲಿ ಫಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಜಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟು ಆಫೀಸರವರು ಅಧಿಕಾರ ಪುಳಿಸಿಕೊಂಡಿರುತ್ತಾರೆ

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದಯೊ ಅವನು ಕೂಡಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವಂದಂಶ ಮೊ ಬಲಗನ್ನ ಅಡ್ವಾನಸಾಗಿ ತೇವಣಿ ಯಿಟ್ಟು ಬಾಕೀ ಮೊಬಲಗನ್ನು ಸ್ಯ 1887ನೇ ಇಸವಿ ಏಪ್ರಿಲ್ 20ರ ಲಾಗಾಯತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು, ದರಕ್ಕಾಸ್ತುದಾರನು ಪ್ರತಿಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪ ದೇ ಕೊಡುತ್ತಾ ಬರುವದಕ್ಕೆ ಲಾಯಖಾದ ವಬ್ಬನನ್ನು ಜಾಮೀನು ಕೊಡಬೇಕು.

5. ತೇವಣಿ ಯಿಡದೇ ಯಿದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ದರಕಾಸ್ತುದಾರನಿಗೆ ಲುಕ್ಸಾನುಕರವಾಗಿ ಕಂಟ್ರಾಕ್ಟು ಯು ರಡನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಣಿನಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಡೆಪ್ಯೂಟಿ ಕಮ್ಮಿಷನರವರು ತಮಿ ಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನುದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ದುರಡನೆ ಹರಾಜು ಮಾಡಲ್ಪಡುವದಕ್ಕೆ ಗುರಿ ಯಾಗತಕ್ಕದ್ದು. ಆದರಿಂದ ಯೇನಾದರು ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ತಿಂಯಿ 4 ಮತ್ತು 5ನೇ ಕಲಂಮಿನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾ ಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ 0—1—0 ಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕ್ಕು ಲೆಕ್ಕವನ್ನ ಯಿಡಲು ಸಹ ಕಂಟ್ರಾಕ್ಟುದಾ ರನು ಬದ್ಧನಾಗಿ ಯಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ವೈದ್ಯೋಗಸ್ಥರ ಇನ್‌ಸ್ಪೆಕ್ಷಣಿಗೆ ಲೆಕ್ಕ ವಳಗಾಗಿ ಯಿರತಕ್ಕದ್ದು.

8. ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ನುಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಕ್ಕದನ್ನ ಮಂಜರಾಬಾದು ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳಪಟ್ಟಿ—1882ನೇ ಇಸವಿ ಮಾರ್ಚಿ 18ನೇ ಮುಕ್ತುಂ ಮೈಸೂರು ಗೆಜೆಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಡೆಪ್ಯೂಟಿ ಕಮ್ಮಿಷನರ್.